ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ವೀರಪ್ಪಮೊಯಿಲಿಯವರೂ ಮತ್ತು ಮಾನ್ಯ ನಂಜೇಗೌಡರು ಪ್ರಧಾನವಾಗಿ ಮುಂದಿನ ಕಲಾಪ ನಡೆಯತಕ್ಕ ವಿಚಾರದಲ್ಲಿ ನೈತಿಕತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಕ್ಕಾಗಿ ನಾನು ಸ್ವಲ್ಪ ಮುಜುಗರದಲ್ಲಿದ್ದೇ ಅದಕ್ಕೆ ನಾನು ನನ್ನ ಕಾರ್ಯದರ್ಶಿಯವರಿಂದ ವಿವರಗಳನ್ನು ಪಡೆದುಕೊಂಡಿದ್ದೇನೆ. ಈ ಅಧಿವೇಶನ ಜುಲೈ ತಿಂಗಳ 4 ರಂದು ಪ್ರಾರಂಭವಾದಮೇಲೆ 42 ದಿನಗಳ ಅವಧಿಗೆ ಸುಮಾರು 29 ಅಧಿವೇಶನಗಳನ್ನು ನಾವು ನಡೆಸಿದ್ದೇವೆ. ನಾಳೆಗೆ ನಮ್ಮ ಅಧಿವೇಶನ ಮುಕ್ತಾಯವಾಗಬೇಕಾಗಿತ್ತು. ಈ ಹಂತದಲ್ಲಿ ಈ ಸೂಚನೆಯನ್ನು ತಾವು ಕೊಟ್ಟಿದ್ದೀರಿ. ಈ ರೀತಿ ಸೂಚನೆಯನ್ನು ಕೊಡತಕ್ಕ ಹಕ್ಕು ತಮಗಿದೆ. ಯಾವ ಹಂತದಲ್ಲಾದರೂ ತಾವು ಕೊಡಬಹುದು. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ, ಆದರೆ ನಮ್ಮ ಮನಸ್ಸಿಗೆ ಮನವರಿಕೆ ಆಗಬೇಕಾಗಿತ್ತು. ಯಾವುದಾದರೂ ಒಂದು ಆತಂಕಕಾರಿ ಸ್ಥಿತಿ ಇದ್ದು ಅದು ನನ್ನ ಸಹಾಯದಿಂದ ಪರೋಕ್ಷವಾಗಿ ಯಾವುದಾದರೂ ಒಂದು ಕಡೆಗೆ ನಾನು ವಾಲಿದಂತೆ ತೀರ್ಮಾನವನ್ನು ಕೊಟ್ಟಂತಾಗುತ್ತದೆಯೇ ಎಂಬುದು ನನ್ನ ಮನಸ್ಸಿಗೆ ಸಮಾಧಾನ ಆಗಿದೆ. ಈಗ ಅವಿಶ್ವಾಸ ನಿರ್ಣಯವನ್ನು ತಾವು ಏನು ನನ್ನ ಕಛೇರಿಗೆ ಕೊಟ್ಟಿದ್ದೀರಿ ಅದು ಈಗ ನನ್ನ ಕಛೇರಿಗೆ ಬಂದಿದೆ. ನಾಳೆಯ ದಿವಸ ಅದನ್ನು ನಾನು ಈ ಸಭೆಯ ಮುಂದಿಟ್ಟು ಕಾನೂನು ಪ್ರಕಾರ ಅದನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಎರಡೂ ಕಡೆಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ದಿನವನ್ನು ಗೊತ್ತುಪಡಿಸುತ್ತೇನೆ. ಈಗ ಧನವಿನಿಯೋಗ ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ನನಗೆ ಯಾವುದೇ ನಿರ್ಬಂಧವೂ ಇರುವುದಿಲ್ಲ. ಕಲಾಪವನ್ನು ನಡೆಸುವುದಕ್ಕೆ ನಾನು ನಿಶ್ಚಯಿಸಿದ್ದೇನೆ. ಧನ ವಿನಿಯೋಗ ಮಸೂದೆಯನ್ನು ನಾನು ಈಗ ಕೈಗೆ ಎತ್ತಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಬೇಡಿ ಎಂದು ಹೇಳುತ್ತಿದ್ದೇವೆ. ಅದನ್ನು ತೆಗೆದುಕೊಳ್ಳುವುದು ಬೇಡ ಒಳ್ಳೆಯ ಸಂಪ್ರದಾಯವಲ್ಲ, ಅದು ಸರಿಯಲ್ಲ. ಈ ಸಭೆಗೆ ನೈತಿಕ ಹಕ್ಕಿಲ್ಲ, ಇದು ಒಳ್ಳೆಯದಲ್ಲ, ಇಂಥ ಇತಿಹಾಸ ಎಂದೂ ನಡೆದಿಲ್ಲ, ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಈ ಕೆಲಸವನ್ನು ಮಾಡಬೇಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದು ನೈತಿಕತೆಯ ಕುರುಹೇ? ಅಧ್ಯಕ್ಷರು ರೂಲಿಂಗ್‌ನ್ನು ಕೊಟ್ಟನಂತರ....

ಶ್ರೀಸಿದ್ಧರಾಮಯ್ಯ : ನಿಮಗೆ ರಾಜ್ಯಾಂಗ ಕಾನೂನು, ಕಟ್ಟಳೆ, ನಿಯಮಾವಳಿಗಳು ಏನೂ ಇಲ್ಲವೆ?

ಶಾಸನ ರಚನೆ

(ಎ) ವಿಧೇಯಕಗಳನ್ನು ಮಂಡಿಸುವುದು

(i) ಕರ್ನಾಟಕ ಧನವಿನಿಯೋಗ (ನಂ. 2) ವಿಧೇಯಕ, 1996

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು, ಯೋಜನಾ, ಹಾಗೂ ಕಾರ್ಮಿಕ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ

ಧನವಿನಿಯೋಗ (ನಂ.2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"1996ರ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

"1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. X–1

(ii) ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ, 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

"1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"1996ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು, ಮತ್ತು ಹಣಕಾಸು, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

"1996ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಸಭೆಯಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. X-2

(iii) ಕರ್ನಾಟಕ ತೆರಿಗೆ ಕಾನೂನುಗಳ (ಮೂರನೇ ತಿದ್ದುಪಡಿ) ವಿಧೇಯಕ 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

---

(X–1, X-2, — ಅನುಬಂಧ),